**ದಿನಾಂಕಃ 10.12.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿ ಪರ ವಕೀಲರಿಂದಃ**

ನಾನು ನನ್ನ ಸಾಕ್ಷ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ಅದನ್ನು ನಾನೇ ಹೇಳಿ ಬೆರಳಚ್ಚು ಮಾಡಿಸಿ ಓದಿ, ತಿಳಿದುಕೊಂಡು ಸಹಿಯನ್ನು ಹಾಕಿರುತ್ತೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

ನಾನು ಅಪ್ರಾಪ್ತ ವಯಸ್ಕನಾಗಿದ್ದ ಕಾರಣ ದಾವೆಯನ್ನು ನನ್ನ ಅಜ್ಜಿಯಾದ ಸುಶೀಲಮ್ಮ ರವರು ನನ್ನ ಪರವಾಗಿ ಮೈನರ್ ಗಾರ್ಡಿಯನ್ ಆಗಿ ಹೂಡಿದ್ದು ಆ ಸಮಯದಲ್ಲಿ ಸದರಿಯವರು ನನ್ನ ಪರವಾಗಿ ಸಾಕ್ಷ್ಯವನ್ನು ಪಿಡಬ್ಲ್ಯೂ -1 ಎಂದು ನೀಡುವ ಮೂಲಕ ನಿಶಾನೆ 1 ರಿಂದ 14 ದಾಖಲಾತಿಗಳನ್ನು ಸಲ್ಲಿಸಿರುತ್ತಾರೆ. ಆದರೆ ಈಗ ನಾನು ಪ್ರಾಪ್ತ ವಯಸ್ಕನಾಗಿದ್ದು ದಾವೆಯನ್ನು ನಾನೇ ನಡೆಸಲು ನ್ಯಾಯಾಲಯದಿಂದ ಅನುಮತಿ ಪಡೆದುಕೊಂಡಿರುವುದರಿಂದ ಸದರಿ ದಾಖಲಾತಿಗಳನ್ನು ನನ್ನ ಪರವಾಗಿ ಈಗ ಗುರುತಿಸಿಕೊಳ್ಳಬೇಕೆಂದು ಕೋರುತ್ತೇನೆ.

1. The consent deed dated 24.10.11 is got marked as Ex.P.1.
2. The RTC extract of Sy.No.131 pertaining to year 2008-09 is got marked as Ex.P.2.
3. The death certificate of one Santhamma is got marked as Ex.P.3.
4. Copy of legal notice dated 19.03.2012 is got marked as Ex.P.4.
5. 05 postal receipts are got marked respectively as ExP5 to 9.
6. 05 postal acknowledgmeents are got marked respectively as ExP10 to 14.

   ಎಂದು ಗುರುತಿಸಲಾಯಿತು.

ಮುಂದುವರಿದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**